SCCH – 01
MVC No. 3825 of 2020
RW3

**ಸಾಕ್ಷಿಗೆ ದಿನಾಂಕಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ಮುಂದುವರೆದ ಮುಖ್ಯ ವಿಚಾರಣೆ: 3 ನೇ ಎದುರುದಾರರ ಪರ ವಕೀಲರಾದ ಶ್ರೀ ಕೆ.ಎಸ್ ವಕೀಲರಿಂದಃ**

1) ವಾಹನ ಸಂಖ್ಯೆ **KA-51-C-0487** ಸಂಖ್ಯೆಯ ಲಾರಿಗೆ ನಮ್ಮ ಸಂಸ್ಥೆಯಿಂದ ವಿಮಾ ಪಾಲಿಸಿಯನ್ನು ನೀಡಲಾಗಿದೆ ಆ ಬಗ್ಗೆ ಇರುವ ವಿಮಾ ಪಾಲಿಸಿಯನ್ನು ಹಾಜರುಪಡಿಸಲಾಗಿದೆ ಮತ್ತು ಅದನ್ನು ನಿ.ಆರ್.**9** ಎಂದು ಗುರುತಿಸಿದೆ.

2) ಈಗ ಒಟ್ಟು **5** ಹಾಳೆಗಳನ್ನು ಈ ಸಾಕ್ಷಿದಾರರು ಹಾಜರುಪಡಿಸಿದ್ದಾರೆ ಮತ್ತು ಪ್ರೀಮಿಯಮ್ ಕಟ್ಟಿರುವ ಬಗ್ಗೆ **3** ಹಾಳೆಗಳು ಒಟ್ಟಾಗಿ ಒಂದು ದಾಖಲೆ ಆಗಿದೆ ಎಂಬುದಾಗಿಯೂ, ಮತ್ತು ಆ ಪಾಲಿಸಿಯನ್ನು ಪಡೆದುಕೊಂಡ ವ್ಯಕ್ತಿಯು ಯಾವ ಸಮಯದಲ್ಲಿ ಎಷ್ಟು ಹಣವನ್ನು ಪಾವತಿ ಮಾಡಿದ್ದಾರೆ ಎಂಬ ವಿವರಗಳನ್ನು ಬರೆದಿರುವ **2** ಹಾಳೆಗಳನ್ನು ಮತ್ತೊಂದು ದಾಖಲೆ ಎಂಬುದಾಗಿಯೂ ವಿಮಾ ಸಂಸ್ಥೆಯವರು ತೋರಿಸಿದ್ದಾರೆ ಮತ್ತು ಈ ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕು ಎಂಬುದಾಗಿ ಪ್ರಾರ್ಥಿಸಿದ್ದಾರೆ. ಇದಕ್ಕೆ ಪ್ರತಿಯಾಗಿ **1** ನೇ ಮತ್ತು **2** ನೇ ಎದುರುದಾರರ ಪರ ವಕೀಲರು "ಈ ದಾಖಲೆಗಳು **Excel Spread Sheet** ಸೌಲಭ್ಯವನ್ನು ಬಳಸಿಕೊಂಡು ಸಿದ್ಧಪಡಿಸಲಾಗಿದೆ ಮತ್ತು **Excel Spread Sheet** ನಲ್ಲಿ ವಿವರಗಳನ್ನು ಕಲೆ ಹಾಕುವಾಗ ಮೂಲ

ವಿವರಗಳನ್ನು ತಿರುಚಿ ಮತ್ತೆ ಬೇರೆ ವಿವರಗಳನ್ನು ನಮೂದು ಮಾಡಲು ಎಲ್ಲಾ ಗಣಕಯಂತ್ರಗಳಲ್ಲಿಯೂ ಸಾಧ್ಯ ಇರುತ್ತದೆ ಹೀಗಾಗಿ ಈ ಎರಡೂ ದಾಖಲೆಗಳನ್ನು ತಮ್ಮ ತಕರಾರಿಗೆ ಒಳಪಟ್ಟು ನಿಶಾನೆಗಳನ್ನಾಗಿ ಗುರುತಿಸಬೇಕು" ಎಂದು ಪ್ರಾರ್ಥಿಸಿದ್ದಾರೆ. ಇದಕ್ಕೆ ಪ್ರತಿಯಾಗಿ **3** ನೇ ಎದುರುದಾರರ ಪರ ವಕೀಲರು "ಈ ಹಾಳೆಗಳಿಗೆ ಸಂಬಂಧ ಪಟ್ಟ ಹಾಗೆ ಒಂದು **CD** ಅನ್ನು ಹಾಜರುಪಡಿಸಲಾಗಿದೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ **63 (**ಸಿ**)** ರೀತಿಯಲ್ಲಿ ಪ್ರಮಾಣ ಪತ್ರಗಳನ್ನೂ ಸಹಾ ಹಾಕಲಾಗಿದೆ ಮತ್ತು ಆ ಕಾರಣದಿಂದ ಈ ದಾಖಲೆಗಳನ್ನು ನಿಶಾನೆಗಳನ್ನು ಗುರುತಿಸಬೇಕು" ಎಂದು ನುಡಿದಿದ್ದಾರೆ.

3) ಮೇಲೆ ಹೇಳಿದ ಎಲ್ಲಾ ಸೂಕ್ಷ್ಮಗಳನ್ನು ಈ ಹಂತದಲ್ಲಿ ಕೂಲಂಕುಶವಾಗಿ ಪರಿಶೀಲನೆ ಮಾಡಲು ಸಾಕಷ್ಟು ಸಮಯ ಹಿಡಿಯುವುದರಿಂದ ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ಈ ದಾಖಲೆಗಳನ್ನು ಗುರುತಿಸುವುದು ಸೂಕ್ತ ಮತ್ತು ಅಂತಿಮ ತೀರ್ಪು ಬರೆಯುವ ಸಮಯದಲ್ಲಿ ಮೇಲೆ ಹೇಳಿದ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಪರಿಗಣಿಸಬೇಕು ಎಂಬ ತೀರ್ಮಾನಕ್ಕೆ ನ್ಯಾಯಾಲಯವು ಬಂದಿದೆ. ಆದ ಕಾರಣದಿಂದ ಮೇಲೆ ಹೇಳಿದ **3** ಹಾಳೆಗಳನ್ನು ಮತ್ತು ಮೇಲೆ ಹೇಳಿದ ಮತ್ತೆ **2** ಹಾಳೆಗಳನ್ನು **1** ನೇ ಮತ್ತು **2** ನೇ ಎದುರುದಾರರ ಪರ ವಕೀಲರ ತಕರಾರುಗಳಿಗೆ ಒಳಪಟ್ಟು ನಿ.ಆರ್.**10** ಮತ್ತು ನಿ.ಆರ್.**11** ಎಂದು ಗುರುತಿಸಿದೆ.

4) **65(**ಬಿ**)** ಸರ್ಟಿಫಿಕೇಟ್ ಗಳನ್ನು ನಿ**.**ಆರ್**.12** ಮತ್ತು ನಿ**.**ಆರ್**.13** ಎಂದು ಗುರುತಿಸಿದೆ**.**

5) ಒಂದು **CD** ಹಾಜರುಪಡಿಸಿದ್ದು ಅದನ್ನು ನಿ**.**ಆರ್**.14** ಎಂದು ಗುರುತಿಸಿದೆ**.**

**ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.